
# ಯುವ ವೇದಿಕೆ



## ವ್ಯಕ್ತಿತ್ವದ ಬೆಳವಣಿಗೆ—೨

### ವ್ಯಕ್ತಿತ್ವದ ವಿವಿಧ ಅಂಶಗಳು

**ವ್ಯಕ್ತಿತ್ವ** ಯಾವ ಯಾವ ಅಂಶಗಳಿಂದ ಕೂಡಿದೆ ಎಂಬುದನ್ನು ಈಗ ವಿಚಾರ ಮಾಡೋಣ. ಮೊದಲನೆಯದಾಗಿ ವಿವಿಧ ಅಂಗಾಂಗಳಿಂದ ಕೂಡಿರುವ ಸ್ಥೂಲ ಭೌತಿಕ ಶರೀರವಿದೆ. ಬಾಹ್ಯ ಇಂದ್ರಿಯ ಮತ್ತು ಪ್ರಾಣ ಶಕ್ತಿಗಳು ಅದರ ಅಂಶಗಳಾಗಿವೆ. ಅನಂತರ ಆಲೋಚನೆ, ಭಾವನೆ, ಇಚ್ಛೆ, ಕಲ್ಪನೆ ಮುಂತಾದುವುಗಳಿಂದ ಕೂಡಿದ ಸೂಕ್ಷ್ಮ ಮಾನಸಿಕ ಶರೀರವಿದೆ. ಇವುಗಳಲ್ಲದೆ **'ನಾನು'** ಎಂಬ ವ್ಯಕ್ತಿಪ್ರಜ್ಞೆ ಇದೆ. ಇದನ್ನೇ ಜೀವಾತ್ಮ ಎಂದು ಕರೆಯುವುದು. ಇದೇ ಈ ವ್ಯಕ್ತಿತ್ವದ ಎಲ್ಲ ಚಟುವಟಿಕೆಗಳನ್ನೂ ಒಗ್ಗೂಡಿಸುತ್ತದೆ; ಇದೇ ಎಲ್ಲ ಕ್ರಿಯೆಗಳ **'ಕರ್ತೃ'**. ಈ 'ನಾನು' ಎಂಬ ಅಂಶ, ಈ **'ಅಹಂ'**ಕಾರವು ಸರಿಯಾಗಿ ಕೆಲಸ ಮಾಡದಿದ್ದರೆ ವ್ಯಕ್ತಿತ್ವದಲ್ಲಿ ಅವ್ಯವಸ್ಥೆ ಕಂಡುಬರುತ್ತದೆ, ಕೆಲವೊಮ್ಮೆ ಇದು ತೀವ್ರವಾದರೆ ಮನೋರೋಗ, ಬುದ್ಧಿವಿಕಲ್ಪಗಳು ಉಂಟಾಗುತ್ತವೆ. ಅಹಂಕಾರದ ಕ್ರಿಯೆಯನ್ನು ಪರಮಾಣು ಕೇಂದ್ರದ (*nucleus*) ಕ್ರಿಯೆಗೆ ಹೋಲಿಸಬಹುದು. ಪರಮಾಣು ಕೇಂದ್ರವು ಪರಮಾಣುವಿನ ಎಲ್ಲ ಶಕ್ತಿಗಳನ್ನೂ ಒಗ್ಗೂಡಿಸುತ್ತದೆ. ಈ ಅಹಂಕಾರವೇ ವ್ಯಕ್ತಿತ್ವಕ್ಕೆ ತನ್ನತನವನ್ನು ನೀಡುತ್ತದೆ. ಇದು ಬೆಳೆದಂತೆ ವ್ಯಕ್ತಿಪ್ರಜ್ಞೆಯೂ ಬೆಳೆಯುತ್ತ ಹೋಗುತ್ತದೆ. ಮಗುವಿನಲ್ಲಿ ಅಹಂಕಾರ ಇನ್ನೂ ಪೂರ್ಣ ಬೆಳವಣಿಗೆಯನ್ನು ಹೊಂದಿರದೆ ಇರುವುದರಿಂದ ಅದರಲ್ಲಿ ವ್ಯಕ್ತಿಪ್ರಜ್ಞೆ ತುಂಬ ಕಡಮೆ ಇರುತ್ತದೆ. ಅದು ತನ್ನನ್ನು ತಾನು ಪ್ರತ್ಯೇಕ ವ್ಯಕ್ತಿಯೆಂದು ಪರಿಗಣಿಸದೆ ಪರಿಸರದೊಡನೆ ತನ್ನನ್ನು ಒಂದಾಗಿಸಿಕೊಂಡಿರುತ್ತದೆ. ಅದು ಬೆಳೆದಂತೆಲ್ಲ 'ನಾನು' ಎಂಬ ವ್ಯಕ್ತಿಪ್ರಜ್ಞೆಯೂ ಬೆಳೆಯುತ್ತ ಹೋಗುತ್ತದೆ. ಆದ್ದರಿಂದ ಸರಿಯಾದ ರೀತಿಯಲ್ಲಿ ಅಹಂಕಾರದ ಬೆಳವಣಿಗೆ ವ್ಯಕ್ತಿತ್ವದ ಪ್ರೌಢಿಮೆಯನ್ನು ಸೂಚಿಸುತ್ತದೆ. ಆದರೆ ಈ ಅಹಂಕಾರವು ಹೆಮ್ಮೆ, ದುರಭಿಮಾನ ದುರಹಂಕಾರ ಮುಂತಾದ ಭಾವೋದ್ವೇಗಗಳಿಗೆ ಸಂಬಂಧಿಸಿದುದಲ್ಲ.

### ಮಾನವನ ವಿಶಿಷ್ಟತೆ

ಪ್ರಜ್ಞೆಯು ಜಡಪದಾರ್ಥದಿಂದ ಹಿಡಿದು ಪ್ರೌಢ ಮಾನವನವರೆಗೆ ವಿಕಾಸಹೊಂದುತ್ತ ಹೋದಂತೆಲ್ಲ ವ್ಯಕ್ತಿಪ್ರಜ್ಞೆಯೂ ಬೆಳೆಯುತ್ತ ಹೋಗುತ್ತದೆ. ನಾವು ಜಡ ಪದಾರ್ಥಗಳಿಗೆ ವ್ಯಕ್ತಿತ್ವವನ್ನು ಆರೋಪಿಸುವುದಿಲ್ಲ. ಸಸ್ಯ ಮತ್ತು ಪ್ರಾಣಿಗಳಲ್ಲಿ ಹೆಚ್ಚು ಪ್ರಜ್ಞಾವಿಕಾಸ ಕಂಡು ಬರುತ್ತದೆ. ಹೊರಗಿನ ವಾತಾವರಣದ ಒಂದು ಅಸ್ಪಷ್ಟ ಪ್ರಜ್ಞೆ ಜೀವಕೋಶಗಳಿಗಿರುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಆದರೂ ಸಸ್ಯಪ್ರಾಣಿಗಳಲ್ಲಿ 'ನಾನು' ಎಂಬ ವ್ಯಕ್ತಿಪ್ರಜ್ಞೆ ಸ್ಪಷ್ಟವಾಗಿ ಕಂಡು ಬರುವುದಿಲ್ಲ. ಅವುಗಳು ಒಂದಕ್ಕೊಂದು ಪ್ರತ್ಯೇಕವಾಗಿದ್ದರೂ ತಮ್ಮ ಪ್ರತ್ಯೇಕ ಅಸ್ತಿತ್ವದ ಪ್ರಜ್ಞೆ ಅವುಗಳಿಗಿರುವಂತೆ ಕಂಡು ಬರುವುದಿಲ್ಲ. ಮನುಷ್ಯನಲ್ಲಿ ಮಾತ್ರ ಈ ವ್ಯಕ್ತಿಪ್ರಜ್ಞೆಯು ಸ್ಪಷ್ಟವಾಗಿ ಕಂಡುಬರುತ್ತದೆ ಮತ್ತು ಇದು ಆತ್ಮಪ್ರಜ್ಞೆಯು ಬೆಳೆದಂತೆಲ್ಲ ವೃದ್ಧಿಸುತ್ತ ಹೋಗುತ್ತದೆ. ಇದು ಮನುಷ್ಯನ ಒಂದು ವಿಶಿಷ್ಟತೆ. ಈ ವಿಶಿಷ್ಟತೆಯನ್ನು ಕುರಿತಾಗಿ ಜೂಲಿಯನ್ ಹಕ್ಸ್ಲೆ ಹೀಗೆ ಹೇಳುತ್ತಾರೆ : 'ಮಾನವನ ಕೆಲವು ವಿಶಿಷ್ಟ ಲಕ್ಷಣಗಳನ್ನು ಮಾನಸಿಕ ಮತ್ತು ಸಾಮಾಜಿಕ ಎಂದು ಕರೆಯಬಹುದೇ ಹೊರತು ಸಂಕುಚಿತವಾಗಿ ಜೈವಿಕ ಎನ್ನಲಾಗುವುದಿಲ್ಲ. ಈ ವಿಶಿಷ್ಟತೆಯು ಈ ಕೆಳಗಿನ ಲಕ್ಷಣಗಳಲ್ಲಿ ಯಾವುದಾದರೊಂದರಿಂದ ಉದ್ಭವಿಸುತ್ತದೆ. ಮೊದಲನೆಯದು, **ಸೂಕ್ಷ್ಮ ಮತ್ತು ಸಾಮಾನ್ಯ ಆಲೋಚನಾ ಸಾಮರ್ಥ್ಯ**. ಎರಡನೆಯದು, **ತನ್ನ ಮಾನಸಿಕ ಕ್ರಿಯೆಗಳನ್ನು ಸಾಪೇಕ್ಷವಾಗಿ ಒಂದುಗೂಡಿಸುವ ಶಕ್ತಿ**. ಇದಕ್ಕೆ ವಿರುದ್ಧವಾಗಿ ಪ್ರಾಣಿಗಳ ಮನಸ್ಸು ಮತ್ತು ವರ್ತನೆ ಹೆಚ್ಚು ಪ್ರತ್ಯೇಕಗೊಂಡಿರುತ್ತದೆ. ಮೂರನೆಯದು, ಕ್ರಮಬದ್ಧ **ಸಂಪ್ರದಾಯ ಸಂಸ್ಕೃತಿಯನ್ನು ಆಧರಿಸಿದ ಮತ್ತು ತಮ್ಮದೇ ನೈರಂತರ್ಯವನ್ನು ಪಡೆದಿರುವ ಜನಾಂಗ, ದೇಶ, ಪಕ್ಷ, ಮತ ಮುಂತಾದ ಸಾಮಾಜಿಕ ಘಟಕಗಳು**.' (*The Uniqueness of Man*, p.27)

ಈ ವಿಶಿಷ್ಟತೆಯು ಅವನಿಗೆ ತನ್ನನ್ನು ತಾನು ಅರಿಯುವ, ತನ್ನ ಜೈವಿಕ ಮಿತಿಯನ್ನು ಮೀರಿ ವಿಕಾಸ ಹೊಂದಿ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸುವ ಸಾಮರ್ಥ್ಯವನ್ನು ನೀಡಿದೆ. ಈ ಅವಕಾಶವನ್ನು ಕಳೆದುಕೊಳ್ಳದೆ ವಿಕಾಸದ

**ಆಂತರಿಕ ಸೌಂದರ್ಯವೆಂದರೇನು ?**

ನಿಮ್ಮ ಸಂತೋಷ ಹಾಗೂ ಸೌಭಾಗ್ಯವನ್ನು ಇತರರೊಡನೆ ಹಂಚಿಕೊಳ್ಳುವುದು, ನಿಮ್ಮನ್ನು ನೀವು ಒಪ್ಪಿಕೊಳ್ಳುವುದು, ಇತರರನ್ನು ಅನುಕರಿಸದೆ ಇರುವುದು, ಹಿಂದಿನ ತಪ್ಪುಗಳಿಗೆ ನಿಮ್ಮನ್ನು ಹಾಗೂ ಇತರರನ್ನು ಕ್ಷಮಿಸುವ ಸೌಹಾರ್ದತೆಯನ್ನು ಬೆಳೆಸಿಕೊಳ್ಳುವುದು, ಇತರರಲ್ಲಿ ಹಾಗೂ ನಿಮ್ಮಲ್ಲಿರುವ ಒಳ್ಳೆಯತನವನ್ನು ಗುರುತಿಸಿ ಮೆಚ್ಚಿಕೊಳ್ಳುವುದು, ವಾಸ್ತವಿಕತೆಗೆ ಹೊಂದಿಕೊಳ್ಳುವುದು, ನಿಮ್ಮ ಹಾಗೂ ಇತರರ 'ವ್ಯಕ್ತಿತ್ವವನ್ನು' ಬೆಳೆಸಿಕೊಳ್ಳಲು ಹಾತೊರೆಯುವುದು ಹಾಗೂ ಆತ್ಮ-ಗೌರವವನ್ನು ಬೆಳೆಸಿಕೊಳ್ಳುವುದು ಮತ್ತು ಇತರರ ಆತ್ಮ-ಗೌರವಕ್ಕೆ ಮನ್ನಣೆ ನೀಡುವುದು. (Maxwell Maltz ರ *Thoughts to Live by ಗ್ರಂಥದಿಂದ.*)

ಉನ್ನತೋನ್ನತ ಹಂತವನ್ನು ಏರುತ್ತ ಮಾನವನು ಮುಂದುವರಿಯಬೇಕು. ತನ್ನ ವೈಯಕ್ತಿಕ ಜವಾಬ್ದಾರಿಯನ್ನು ತಾನೇ ಹೊತ್ತುಕೊಳ್ಳುವ ವ್ಯಕ್ತಿಸ್ವಾತಂತ್ರ್ಯವನ್ನೂ ಈ ವಿಶಿಷ್ಟತೆ ಅವನಿಗೆ ನೀಡುತ್ತದೆ. ಇದರ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನೂ ಅದು ಅವನಿಗೆ ನೀಡುತ್ತದೆ. ತನ್ನ ವೈಯಕ್ತಿಕ ಹೊಣೆಯೊಂದಿಗೆ ಸಮಾಜದಲ್ಲಿ ಜವಾಬ್ದಾರಿಯುತ ಪ್ರಜೆಯಾಗಿಯೂ ಅವನು ಬಾಳಬೇಕಾಗುತ್ತದೆ. ಇದು ಮಾನವನಾಗಿ ವ್ಯಕ್ತಿಯು ಸಾಧಿಸಬೇಕಾದ ವಿಕಾಸ. ಹೀಗೆ ಅವನು ತನ್ನ ಜೈವಿಕ ಮಿತಿಯನ್ನು ಮೀರಿ ಬೆಳೆಯುತ್ತಾನೆ. ಇಲ್ಲದಿದ್ದರೆ ಅವನ ಜೀವನ ವ್ಯರ್ಥವಾದಂತಾಗುತ್ತದೆ. ಒಂದು ಸಂಸ್ಕೃತ ಶ್ಲೋಕ ಹೀಗೆ ಹೇಳುತ್ತದೆ:

> ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌಸ್ತ್ವಯಾ ।
> ಪಾರಂ ದುಃಖೋದಧೇಃ ಗಂತುಂ ತರ ಯಾವನ್ನ ಬಿಧ್ಯತೇ ॥

**'ಮಹತ್ತರವಾದ ಪುಣ್ಯದ ಬೆಲೆಯನ್ನು ತೆತ್ತು ನೀನು ಈ (ಮಾನವ) ಶರೀರವೆಂಬ ನೌಕೆಯನ್ನು ಕೊಂಡುಕೊಂಡಿದ್ದೀಯೆ—ದುಃಖ ಸಾಗರವನ್ನು ದಾಟುವುದಕ್ಕಾಗಿ. ಅದು ಮುರಿದು ಹೋಗುವುದಕ್ಕೆ ಮುಂಚೆ ಇದನ್ನು ದಾಟಬೇಕು.'**

## ಮಾನವನಲ್ಲಿ ಆಧ್ಯಾತ್ಮಿಕ ಅಂಶ

'ನಾನು' ಎಂಬ ವ್ಯಕ್ತಿಪ್ರಜ್ಞೆ ಮಾನವನಲ್ಲಿದೆ ಎಂಬುದನ್ನು ನೋಡಿದೆವು. ಇದರ ಹಿನ್ನೆಲೆ ಯಾವುದು? ***ವಿವೇಕ ಚೂಡಾಮಣಿ***ಯಲ್ಲಿ ಶಂಕರಾಚಾರ್ಯರು ಹೇಳುತ್ತಾರೆ: **ಅಸ್ತಿ ಕಶ್ಚಿತ್ ಸ್ವಯಂ ನಿತ್ಯಮಹಂಪ್ರತ್ಯಯಲಂಬನಃ** |—'ಅಹಂ ಪ್ರಜ್ಞೆಗೆ ಆಶ್ರಯನಾಗಿರುವ ಶಾಶ್ವತವಾದ ಒಂದು (ಅಂಶ) ಇರಬೇಕು.' ಅದನ್ನೇ ಆಧ್ಯಾತ್ಮಿಕವೆಂದು ಕರೆಯುವುದು. ಈ ಆಧ್ಯಾತ್ಮಿಕ ಅಂಶವು ದೇಹ ಮನಸ್ಸು ಇಂದ್ರಿಯಗಳಿಂದ ಬೇರೆಯಾಗಿರಬೇಕು. ಏಕೆಂದರೆ ದೇಹ ಮನಸ್ಸುಗಳ ಕ್ರಿಯೆಗಳನ್ನು ವಿಷಯೀಕರಿಸಬಹುದು, ಅಂದರೆ ವಸ್ತುಗಳನ್ನು ನೋಡುವಂತೆ ಅವುಗಳನ್ನು ನೋಡಬಹುದು. ವಿಷಯಿ ಅಥವಾ ನೋಡುವವನು ಇವುಗಳೆಲ್ಲದರಿಂದ ಬೇರೆಯಾಗಿರಬೇಕು. ಅವನು ಅಭೌತಿಕನೂ ಅಮಾನಸಿಕನೂ ಆಗಿರಬೇಕು. ***ದೃಗ್-ದೃಶ್ಯ-ವಿವೇಕ*** ಎಂಬ ಗ್ರಂಥವು ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ: 'ರೂಪವು ದೃಶ್ಯ, ಕಣ್ಣು ಅದನ್ನು ನೋಡುತ್ತದೆ. ಮನಸ್ಸಿಗೆ ಕಣ್ಣು ದೃಶ್ಯವಾಗುತ್ತದೆ. ಮಾನಸಿಕ ವೃತ್ತಿಗಳು ಸಾಕ್ಷಿಯಾದ ಆತ್ಮನಿಗೆ ದೃಶ್ಯವಾಗುತ್ತವೆ.ಆದರೆ ಆತ್ಮನು ಯಾವುದಕ್ಕೂ ದೃಶ್ಯವಾಗುವುದಿಲ್ಲ, ಅವನು ಕೇವಲ ನೋಡುವವನು.'(*ದೃಗ್-ದೃಶ್ಯ-ವಿವೇಕ, ೧*)

ಉಪನಿಷತ್ತುಗಳು ಈ ಆತ್ಮತತ್ತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ, ಸಮರ್ಥವಾಗಿ, ಅನೇಕ ಉದಾಹರಣೆಗಳ ಮೂಲಕ ಪ್ರತಿಪಾದಿಸುತ್ತವೆ. ಕಠೋಪನಿಷತ್ತು ಹೀಗೆ ಹೇಳುತ್ತದೆ:

> ಏಷ ಸರ್ವೇಷು ಭೂತೇಷು ಗೂಢೋऽऽತ್ಮಾ ನ ಪ್ರಕಾಶತೇ ।
> ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥

'ಎಲ್ಲ ಪ್ರಾಣಿಗಳಲ್ಲಿಯೂ ಗೂಢವಾಗಿ ನೆಲಸಿರುವ ಈ ಆತ್ಮನು ಪ್ರಕಾಶಿಸುವುದಿಲ್ಲ. ಆದರೆ ಸೂಕ್ಷ್ಮದರ್ಶಿಗಳು ಏಕಾಗ್ರವಾದ ಸೂಕ್ಷ್ಮವಾದ ಬುದ್ಧಿಯಿಂದ ಅವನನ್ನು ಅರಿಯುತ್ತಾರೆ.' (*ಕಠ. ೧.೩.೧೨*) ಇನ್ನೊಂದು ಉಪನಿಷತ್ತು ಹೀಗೆ ಹೇಳುತ್ತದೆ:

> ಘೃತಮಿವ ಪಯಸಿ ನಿಗೂಢಂ
> ಭೂತೇ ಭೂತೇ ವಸತಿ ವಿಜ್ಞಾನಮ್ ।
> ಸತತಂ ಮಂಥಯಿತವ್ಯಂ
> ಮನಸಾ ಮಂಥಾನ ಭೂತೇನ ॥

'ಹಾಲಿನಲ್ಲಿ ಬೆಣ್ಣೆಯು ಅಡಗಿರುವಂತೆ ಪ್ರತಿಯೊಂದು ಜೀವಿಗಳಲ್ಲಿಯೂ ದಿವ್ಯಪ್ರಜ್ಞೆಯು ಅಂತರ್ಹಿತವಾಗಿದೆ. ಹಾಲನ್ನು ಕಡೆದು ಬೆಣ್ಣೆಯನ್ನು ತೆಗೆಯುವಂತೆ ಸಾಧನೆಯ ಮೂಲಕ ಮನಸ್ಸೆಂಬ ಕಡಗೋಲಿನಿಂದ ನಮ್ಮ ವ್ಯಕ್ತಿತ್ವವನ್ನು ಕಡೆದು ಈ ದಿವ್ಯಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸಬೇಕು.'(*ಅಮೃತಬಿಂದೂಪನಿಷತ್,೨೦*)

## ದಿವ್ಯತೆಯ ಅಭಿವ್ಯಕ್ತಿ

ಈ ದಿವ್ಯತೆಯು ಹಲವು ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆ. ವಿದ್ಯುತ್ ನಮ್ಮ ಕಣ್ಣಿಗೆ ಅಗೋಚರವಾದರೂ ಬೆಳಕಿನ ರೂಪದಲ್ಲಿ, ಶಾಖದ ರೂಪದಲ್ಲಿ, ವಿವಿಧ ಶಕ್ತಿಗಳ ರೂಪದಲ್ಲಿ ಅದು ವ್ಯಕ್ತವಾಗುತ್ತದೆ. ಹಾಗೆಯೇ ಈ ದಿವ್ಯತೆಯೂ ನೈತಿಕ ಪರಿಪೂರ್ಣತೆಯ ರೂಪದಲ್ಲಿ, ಅನಂತ ಮಾನವಪ್ರೇಮದ ರೂಪದಲ್ಲಿ, ಅಪಾರ ಬುದ್ಧಿಸಾಮರ್ಥ್ಯ, ಪ್ರತಿಭೆಗಳ ರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ಎಮರ್ಸನ್ ಎಂಬ ಅಮೆರಿಕದ ತತ್ತ್ವಜ್ಞಾನಿಯು ಈ ಮಾತನ್ನು ಸಮರ್ಥಿಸುತ್ತಾನೆ: **'ಆತ್ಮವು ಮಾನವನ ಬುದ್ಧಿಶಕ್ತಿಯ ಮೂಲಕ ವ್ಯಕ್ತವಾದಾಗ ಅದೇ ಪ್ರತಿಭೆ; ಅದು ಇಚ್ಛೆಯ ಮೂಲಕ ವ್ಯಕ್ತವಾದಾಗ ಅದೇ ಸದ್ಗುಣ; ಅದು ಅವನ ಭಾವನೆಯ ಮೂಲಕ ವ್ಯಕ್ತವಾದಾಗ ಅದು ಪ್ರೀತಿ.'**



"ಜನ್ಮರಹಿತವಾದ, ಅನಾದಿಯಾದ, ಅಸ್ಪೃಷ್ಟವಾದ ಮತ್ತು ರೂಪರಹಿತವಾದ ಒಂದು ವಸ್ತು ಇರಬೇಕು. ಅಂತಹದೊಂದು ಇಲ್ಲದಿದ್ದಿದ್ದರೆ ಹುಟ್ಟುಳ್ಳ, ಆದಿಯುಳ್ಳ, ಸ್ಪೃಷ್ಟವಾದ ಮತ್ತು ರೂಪದಿಂದ ಕೂಡಿದ ಈ ಜಗತ್ತಿನಿಂದ ಪಾರಾಗುವುದು ಅಸಾಧ್ಯವಾಗುತ್ತಿತ್ತು."

ಭಗವಾನ್ ಬುದ್ಧ

ಸ್ವಾಮಿ ವಿವೇಕಾನಂದರ ಹೇಳಿಕೆಯೂ ಇದೇ ಭಾವನೆಯನ್ನು ಪ್ರತಿಧ್ವನಿಸುತ್ತದೆ:

'ಮಾನವ ಸ್ವಭಾವದಲ್ಲಿ ದೃಢವಾಗಿರುವುದೆಲ್ಲ, ಒಳ್ಳೆಯದೆಲ್ಲ, ಬಲಶಾಲಿಯಾಗಿರುವುದೆಲ್ಲ ಈ ದಿವ್ಯತೆಯಿಂದ ಬಂದುದು. ಇದು ಹಲವರಲ್ಲಿ ಸುಪ್ತವಾಗಿದ್ದರೂ, ಮಾನವರಲ್ಲಿ ಒಬ್ಬರಿಗೂ ಮತ್ತೊಬ್ಬರಿಗೂ ಯಾವ ವ್ಯತ್ಯಾಸವೂ ಇಲ್ಲ—ಮೂಲತಃ ಎಲ್ಲರೂ ಪವಿತ್ರಾತ್ಮರು. ನಮ್ಮ ಹಿನ್ನೆಲೆಯಾಗಿ ಒಂದು ಅಸೀಮ ಸಾಗರವಿರುವಂತೆ ಇದೆ. ನೀವು ನಾವುಗಳೆಲ್ಲ ಆ ಅನಂತ ಸಾಗರದಿಂದ ಏಳುವ ಅಲೆಗಳಂತೆ. ನಮ್ಮಲ್ಲಿ ಪ್ರತಿಯೊಬ್ಬರೂ ಆ ದಿವ್ಯತೆಯನ್ನು ಹೊರಗೆ ವ್ಯಕ್ತಗೊಳಿಸಲು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿರುವೆವು. ಪ್ರತಿಯೊಬ್ಬರಲ್ಲಿಯೂ ಆ ಸಚ್ಚಿದಾನಂದ ಸುಪ್ತವಾಗಿದೆ. ಅದೇ ನಮ್ಮ ಸ್ವಭಾವ, ನಮ್ಮ ಆಜನ್ಮಸಿದ್ಧ ಹಕ್ಕು. ನಮ್ಮಲ್ಲಿರುವ ವ್ಯತ್ಯಾಸಗಳಿಗೆ ನಾವು ಅದನ್ನು ವ್ಯಕ್ತಗೊಳಿಸುತ್ತಿರುವುದರಲ್ಲಿ ಇರುವ ತಾರತಮ್ಯವೆ ಕಾರಣ.' (*ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೭. ೩೫೮*)

## ಆಧ್ಯಾತ್ಮವನ್ನು ಕುರಿತು ಪಾಶ್ಚಾತ್ಯ ಮನಶ್ಶಾಸ್ತ್ರಜ್ಞರು

ಇತ್ತೀಚಿನ ದಿನಗಳಲ್ಲಿ ಮನಶ್ಶಾಸ್ತ್ರಜ್ಞರೂ ಕೂಡ ಮಾನವನಲ್ಲಿ ಈ ಆಧ್ಯಾತ್ಮಿಕ ಅಂಶವನ್ನು ಗುರುತಿಸುತ್ತಿರುವರು. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ವಿಕ್ಟರ್ ಇ. ಫ್ರಾಂಕ್ಲ್, 'ಸುಪ್ತವಾದ ಹುಟ್ಟುಗುಣಗಳು ಇರುವುದು ಮಾತ್ರವಲ್ಲದೆ, ಸುಪ್ತವಾದ ಆಧ್ಯಾತ್ಮಿಕ ಅಂಶವೂ ಇದೆ' ಎನ್ನುತ್ತಾರೆ (*The Unconscious God*, P.24). ಅವರು ಮತ್ತೆ ಹೇಳುತ್ತಾರೆ: 'ಹೀಗೆ ಆಧ್ಯಾತ್ಮಿಕ ಕೇಂದ್ರ, ಆಧ್ಯಾತ್ಮಿಕ ಕೇಂದ್ರವೊಂದೇ ಮಾನವನಿಗೆ ಏಕತೆಯನ್ನೂ ಪೂರ್ಣತೆಯನ್ನೂ ನೀಡುವಂತಹುದು.' (ಅದೇ, ಪು.೨೭)

ಕೆನ್ ವಿಲ್ಬರ್ ಎಂಬ ಮನಶ್ಶಾಸ್ತ್ರಜ್ಞರ ಪ್ರಕಾರ ಎಲ್ಲ ಮಾನಸಿಕ ರೋಗಗಳಿಗೂ ಕಾರಣ ಆಂತರಿಕ ಆಧ್ಯಾತ್ಮಿಕತೆಗೆ ಅಭಿವ್ಯಕ್ತಗೊಳ್ಳಲು ಅವಕಾಶ ಕೊಡದೆ ಅದನ್ನು ಅದುಮಿಡುವ ಪ್ರಯತ್ನ. ಹಿಂದಿನ ಮನಶ್ಶಾಸ್ತ್ರಜ್ಞರು ಹೇಳುತ್ತಿದ್ದರು, ಲೈಂಗಿಕತೆ ಮುಂತಾದ ಪ್ರವೃತ್ತಿಗಳ ಮುಕ್ತ ಅಭಿವ್ಯಕ್ತಿಗೆ ಅವಕಾಶ ಕೊಡದೆ ಅವುಗಳನ್ನು ಅದುಮಿಡುವುದು ಮಾನಸಿಕ ರೋಗಗಳಿಗೆ ಕಾರಣ ಎಂದು. ಈಗ ಮನಶ್ಶಾಸ್ತ್ರಜ್ಞರು ಆಧ್ಯಾತ್ಮಿಕ ಪ್ರವೃತ್ತಿಯ ಹತ್ತಿಕ್ಕುವಿಕೆಯೇ ಅವುಗಳಿಗೆ ಕಾರಣವೆನ್ನುತ್ತಿದ್ದಾರೆ.

## ಆಧ್ಯಾತ್ಮದಿಂದ ಸಾರ್ಥಕತೆ

ನಮ್ಮಲ್ಲಿರುವ ಆಧ್ಯಾತ್ಮಿಕ ಪ್ರವೃತ್ತಿ ಪೂರ್ಣ ಅಭಿವ್ಯಕ್ತಿಯನ್ನು ಬಯಸುತ್ತದೆ. ಆದರೆ ನಾವು ಹಣ, ಅಧಿಕಾರ, ಇಂದ್ರಿಯಸುಖ ಮುಂತಾದ ಆಸೆಗಳ ಮೂಲಕ ಆ ಪ್ರವೃತ್ತಿಯನ್ನು ದಮನಗೊಳಿಸುತ್ತೇವೆ. ನಮ್ಮ ಸ್ವಾಭಾವಿಕ ಪ್ರವೃತ್ತಿಯನ್ನು ವ್ಯಕ್ತಪಡಿಸದೆ ನಮ್ಮ ಜೀವನಕ್ಕೆ ಸಾರ್ಥಕತೆ ಬರುವುದಿಲ್ಲ. ಒಂದು ವಸ್ತುವು ತನ್ನ ಸಾರ್ಥಕತೆಯನ್ನು ಪಡೆಯುವುದು ಅದರ ನೈಜ ಉದ್ದೇಶವು ಸಫಲವಾದಾಗ. ಮೇಜು ಇರುವುದು ಓದು-ಬರಹಕ್ಕಾಗಿ. ಅದನ್ನು ಬೇರೆ ಉದ್ದೇಶಗಳಿಗಾಗಿಯೂ ಉಪಯೋಗಿಸಬಹುದು. ಆದರೆ ಅದನ್ನು ಓದು-ಬರಹಕ್ಕಾಗಿ ಉಪಯೋಗಿಸಿದಾಗಲೇ ಅದು ತನ್ನ ಸಾರ್ಥಕತೆಯನ್ನು ಪಡೆಯುವುದು. ಒಂದು ಬೀಜ ತನ್ನ ಸಾರ್ಥಕತೆಯನ್ನು ಪಡೆಯುವುದು ಅದು ಮರವಾಗಿ ಬೆಳೆದಾಗಲೆ—ಅದರ ಸಾರಭೂತ ಅಂಶವು ಹೊರಗೆ ಅಭಿವ್ಯಕ್ತವಾದಾಗಲೆ. ಹಾಗೆಯೆ ಮಾನವನ ಸಾರವಾದ ದಿವ್ಯತೆಯು ಪೂರ್ಣ ಅಭಿವ್ಯಕ್ತಿಯನ್ನು ಪಡೆದಾಗಲೆ ಅವನಲ್ಲಿ ನಿಜವಾದ ಸಾರ್ಥಕತೆಯ ಭಾವ ಉಂಟಾಗುತ್ತದೆ.



"ತನ್ನ ಅಸ್ತಿತ್ವಕ್ಕೆ ಒಂದು ವಿಶಾಲ ಅರ್ಥವಿದೆ ಎಂಬ ಪ್ರಜ್ಞೆ ಮಾನವನನ್ನು ಕೇವಲ ಗಳಿಸುವ ಮತ್ತು ಖರ್ಚು ಮಾಡುವ ಸ್ಥಿತಿಯಿಂದ ಮೇಲೇರಿಸುತ್ತದೆ. ಅವನಲ್ಲಿ ಈ ಪ್ರಜ್ಞೆ ಇಲ್ಲದಿದ್ದರೆ ಅವನು ತನ್ನನ್ನು ತಾನೆ ಕಳೆದುಕೊಳ್ಳುತ್ತಾನೆ ಮತ್ತು ದುಃಖಿಯಾಗುತ್ತಾನೆ."

—ಕಾರ್ಲ್ ಜಿ. ಯುಂಗ್.

ನಮ್ಮ ವ್ಯಕ್ತಿತ್ವದ ನಿಜವಾದ ಸಾರ, ನಮ್ಮ ನೈಜ ಸ್ವಭಾವ ಆಧ್ಯಾತ್ಮಿಕವಾದುದು. ವ್ಯಕ್ತಿತ್ವದ ಬೆಳವಣಿಗೆಯೆಂದರೆ ಆತ್ಯಂತಿಕವಾಗಿ ಆಧ್ಯಾತ್ಮಿಕ ಬೆಳವಣಿಗೆ—ಈ ಆಧ್ಯಾತ್ಮಿಕತೆಯ ಪೂರ್ಣ ಅಭಿವ್ಯಕ್ತಿ. ಅಂದರೆ ದೇಹೇಂದ್ರಿಯ ಮನಸ್ಸುಗಳಿಗೆ ಸೀಮಿತವಾದ ನಮ್ಮ ವ್ಯಕ್ತಿತ್ವವನ್ನು ಅವುಗಳ ಬಂಧನದಿಂದ ಮುಕ್ತಗೊಳಿಸಿ ನಮ್ಮ ಆಧ್ಯಾತ್ಮಿಕ ಸ್ಥಿತಿಯಲ್ಲಿ ನೆಲೆನಿಲ್ಲುವುದು. ಈ ಆಧ್ಯಾತ್ಮಿಕ ಆದರ್ಶವನ್ನಿಟ್ಟುಕೊಂಡು ಅದನ್ನು ಪಡೆಯಲು ಪ್ರಯತ್ನಿಸುವುದರ ಮೂಲಕ ನಮ್ಮ ವ್ಯಕ್ತಿತ್ವದಲ್ಲಿ ಹೆಚ್ಚು ಸ್ಥಿರತೆ ಉಂಟಾಗುತ್ತದೆ, ಅದರ ಮೇಲೆ ನಮಗೆ ಹೆಚ್ಚು ಪ್ರಭುತ್ವ ಲಭಿಸುತ್ತದೆ ಮತ್ತು ಹೆಚ್ಚು ಆಂತರಿಕ ಶಾಂತಿ ಲಭಿಸುತ್ತದೆ. ಈ ಸಾಧನೆಯಲ್ಲಿ ನಾವು ಆತ್ಯಂತಿಕ ಗುರಿಯನ್ನು ಮುಟ್ಟದೆ ಇರಬಹುದು, ಆದರೆ ಈ ದಿಕ್ಕಿನಲ್ಲಿ ನಡೆಸುವ ಪ್ರಾಮಾಣಿಕ ಪ್ರಯತ್ನವೇ ಜೀವನಕ್ಕೆ ಸಾರ್ಥಕತೆಯನ್ನು ನೀಡುತ್ತದೆ.

## ವ್ಯಕ್ತಿತ್ವ ಸಮಗ್ರತೆ

ನಮ್ಮ ನೈಜ ಸ್ವರೂಪವಾದ ಅಧ್ಯಾತ್ಮದಲ್ಲಿ ನಾವು ನೆಲೆನಿಂತಾಗ ನಮ್ಮ ವ್ಯಕ್ತಿತ್ವದ ಬೇರೆಲ್ಲ ಅಂಶಗಳೂ ಅದಕ್ಕೆ ಅಧೀನವಾಗಿ ಕೆಲಸ ಮಾಡಲು ಪ್ರಾರಂಭಿಸುತ್ತವೆ. ಇಂದ್ರಿಯ ಕ್ರಿಯೆ, ಆಲೋಚನೆ, ಭಾವನೆ ಇಚ್ಛೆ ಇವೆಲ್ಲವೂ ಸಾಮರಸ್ಯದಿಂದ ಅಧ್ಯಾತ್ಮ ಕೇಂದ್ರಕ್ಕನುಸಾರವಾಗಿ ವರ್ತಿಸತೊಡಗುತ್ತವೆ. ಆಗ ವ್ಯಕ್ತಿತ್ವದಲ್ಲಿ ಸಂಘರ್ಷಗಳಿರುವುದಿಲ್ಲ, ಹೊರಗಿನ ಆಘಾತಗಳಿಂದ ಅದು ವಿಚಲಿತವಾಗುವುದಿಲ್ಲ ಹಾಗೂ ಅದರಲ್ಲಿ ಒಂದು ಸಮನ್ವಯತೆ ಮತ್ತು ಸಮಗ್ರತೆ ಇರುತ್ತದೆ.

ಒಂದು ವಾಹನವನ್ನು ನಡೆಸುವವನಿಗೆ ವಾಹನದ ಮೇಲೆ ಸಂಪೂರ್ಣ ನಿಗ್ರಹ ಇರಬೇಕು. ಆಗಲೇ ಅದನ್ನು ಸರಿಯಾಗಿ ನಡೆಸಬಲ್ಲ ಹಾಗೂ ಅದನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡಿರಬಲ್ಲ. ಇದರಂತೆಯೆ ನಮ್ಮ ವ್ಯಕ್ತಿತ್ವವೂ ಸಂಪೂರ್ಣ ನಮ್ಮ ಹಿಡಿತದಲ್ಲಿರಬೇಕು. ಈ ಪೂರ್ಣತೆ ಅಥವಾ ಸಮಗ್ರತೆಯನ್ನೆ ವ್ಯಕ್ತಿತ್ವವೆಂದು ಕರೆಯುವುದು. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಕಾರ್ಲ್ ಜಿ.ಯುಂಗ್ ಹೇಳುತ್ತಾರೆ: 'ಎಲ್ಲ ಮಾನವ ಕೋಟಿಯ ಆತ್ಯಂತಿಕ ಗುರಿ ಮತ್ತು ಪ್ರಬಲ ಆಸೆಯೇ ಜೀವನದ ಪೂರ್ಣತೆಯನ್ನು ಪಡೆಯುವುದು.'



**ನಮ್ಮ ಗುರಿಯು ಆಧ್ಯಾತ್ಮಿಕ ಪ್ರಗತಿ ಎಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ನಾವು ಅತ್ಯುತ್ತಮರಾಗಲು ಪ್ರಯತ್ನಿಸುತ್ತೇವೆ. ಸುಖವನ್ನು ಪಡೆಯುವುದಕ್ಕೆ ಇದೊಂದೇ ಮಾರ್ಗ.**

—ಎಪಿಕ್ಟಟಸ್ (*ಗ್ರೀಕ್ ತತ್ತ್ವಜ್ಞಾನಿ*)

---

# ಶ್ರೀರಾಮಕೃಷ್ಣ ಪರಮಹಂಸ ದೇವರಿಗೆ



ಸಕಲ ಸಾಕ್ಷಾತ್ಕಾರದ ಮಾನಸ
ಸರೋವರದಿಂದ ಹರಿದು ಬರುವ
ಬಹುಪೂಜೆಯ ವಿವಿಧ ವಾಹಿನಿಗಳು ನಿನ್ನ
ಧ್ಯಾನಸಮುದ್ರದಲ್ಲಿ ಸಂಲಗ್ನವಾಗಿವೆ.

ನಿನ್ನ ಜೀವನದ ಸಮನ್ವಯಮಂದಿರದಲ್ಲಿ
ಅನಂತಾನಂದವು ಅಸಂಖ್ಯವಾಗಿ
ರೂಪುಗೊಂಡಿದೆ.

ಇದೋ ದೂರದಿಂದಲೂ ಹತ್ತಿರ
ದಿಂದಲೂ ಆ ಗುಡಿಗೆ ಯಾತ್ರೆ
ಬರುತ್ತಿರುವ ನಮಸ್ಕಾರಗಳೊಡನೆ
ನನ್ನ ನಮಸ್ಕಾರವನ್ನೂ ನಿವೇದಿಸುತ್ತೇನೆ.

ಮೂಲ: ರವೀಂದ್ರನಾಥ ಠಾಕೂರ

ಅನು: ಕುವೆಂಪು